**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ: 26/2025**

**ದಿನಾಂಕ: 21.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

**ಪಾಟೀ ಸವಾಲು: ಆರೋಪಿ ಪರ ಚೀಪ್ ಡಿಫೇನ್ಸ್ ಶ್ರೀ. ಜಿ.ಎನ್.ಕೆ ವಕೀಲರಿಂದ:**

**3.** ನನ್ನ ಮಗಳಿಗೆ ಮೊದಲನೆ ಮದುವೆ ನಾನೇ ಮಾಡಿಸಿರುತ್ತೇನೆ. ನನ್ನ ಮಗಳ ಮೊದಲನೇ ಗಂಡನೊಂದಿಗೆ ನನ್ನ ಮಗಳು ಚೆನ್ನಾಗಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು ಮತ್ತು ಆಕೆಯ ಮೊದಲನೆ ಗಂಡ ಅನಿಲ ಹಿಂದೂಪುರದಲ್ಲಿ ಇರಲಿಲ್ಲ, ನನ್ನೊಂದಿಗೆ ಇದ್ದರು ಎಂದರೆ ಸರಿಯಲ್ಲ. ಅನಿಲ್ ಥಿಯೇಟರ್ ನಲ್ಲಿ ಟಿಕೇಟ್ ನೀಡುವ ಕೆಲಸ ತನ್ನ ಭಾವನೊಂದಿಗೆ ಮಾಡುತ್ತಿದ್ದರು. ಆ ರೀತಿ ಅನಿಲ್ ಥಿಯೇಟರ್ ನಲ್ಲಿ ಕೆಲಸ ಮಾಡುತ್ತಿರಲಿಲ್ಲ, ನಮ್ಮೊಂದಿಗೆ ವ್ಯಾಪಾರ ಮಾಡಲು ಬರುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ಅನಿಲ್ ನಮ್ಮ ಜೊತೆ ಕೆಲಸ ಮಾಡುತ್ತಿದ್ದರಿಂದ ಆತನಿಗೆ ನಾವು ಹಣ ನೀಡುತ್ತಿರಲಿಲ್ಲ ಮತ್ತು ಅವರನ್ನು ಅವರ ಊರಿಗೂ ಕಳುಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರದಲ್ಲಿ ನಮಗೂ ಮತ್ತು ಅನಿಲ್ ರವರಿಗೂ ಗಲಾಟೆಯಾಗಿ ಅನಿಲ್ ರವರನ್ನು ನಾವು ಹೊಡೆದು ನಮ್ಮ ಮನೆಯಿಂದ ಹೊರ ಹಾಕಿದ್ದೇವು ಎಂದರೆ ಸರಿಯಲ್ಲ. ಅನಿಲ್ ನನ್ನ ಮಗಳೊಂದಿಗೆ ಕೇವಲ ನಾಲ್ಕು ತಿಂಗಳು ಮಾತ್ರ ಜೀವನ

ನಡೆಸಿದ್ದರು. ಅನಿಲ್ ತೀರಿಕೊಂಡಾಗ ನಾವು ಆತನ ಕಾರ್ಯಗಳಿಗೆ ಹೋಗಿರಲಿಲ್ಲ ಎಂದರೆ ಸರಿ. ರೋಜರವರಿಗೆ ನಾಗರಾಜುರವರೊಂದಿಗೂ ಸಹ ಮದುವೆ ಮಾಡಿಕೊಟ್ಟಿದ್ದೇವು ಎಂದರೆ ಸರಿಯಲ್ಲ. ಆತನನ್ನು ಸಹ ನಾವು ಹೊಡೆದು, ಆತನಿಂದ ಹಣ ಕಿತ್ತುಕೊಂಡು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ರೋಜ ಮತ್ತು ನಾಗರಾಜುರವರ ಮದುವೆ ನಾನು ಮಾಡಿಸಿಲ್ಲ ಎಂದರೆ ಸರಿ. ನನ್ನ ಮಗಳು 5 ತಿಂಗಳ ಗರ್ಬಿಣಿಯಾದಾಗ ಆರೋಪಿಯೊಂದಿಗೆ ನಮ್ಮ ಮನೆಗೆ ಬಂದಳು, ನಂತರ ಆರೋಪಿ ಮನೆಯಿಂದ ಹೋಗಿರುತ್ತಾರೆ. ಆರೋಪಿ ನಮ್ಮ ಮನೆಯಲ್ಲಿ ಇರಲಿಲ್ಲ. ನಂತರ ಆರೋಪಿ ಬಿಂಗಿಪಲ್ಲಿಯಲ್ಲಿ ಅವರ ಊರಿನಲ್ಲಿ ವಾಸವಿದ್ದರು. ಆರೋಪಿ ತನ್ನ ಟಿ.ಟಿ. ವಾಹನವನ್ನು ಮಾರಾಟ ಮಾಡಿ ನಮ್ಮ ಬೊಲೇರೊ ವಾಹನ ಖರೀದಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾವು 2022 ರಲ್ಲಿ ಬೊಲೇರೊ ವಾಹನ ಖರೀದಿಸಿರುತ್ತೇವೆ. ಆರೋಪಿ ನನ್ನ ಮಗಳನ್ನು 2023 ರಲ್ಲಿ ಮದುವೆಯಾಗಿರುತ್ತಾನೆ. ಆರೋಪಿ ತನ್ನ ಸೈಟು ಮಾರಾಟ ಮಾಡಿ 20 ಲಕ್ಷ ಹಣವನ್ನು ನನ್ನ ಮಗಳಿಗೆ ನೀಡಿದ್ದ ಎಂದರೆ ಸರಿಯಲ್ಲ. ಆರೋಪಿ ನಮ್ಮ ಜೊತೆ ಕೆಲಸ ಮಾಡುತ್ತಿದ್ದರು ಆತನಿಗೆ ಹಣ ಕೊಡದೇ ಊರಿಗೆ ಕಳುಹಿಸದೇ ನಮ್ಮ ಜೊತೆ ಇಟ್ಟುಕೊಂಡಿದ್ದೇವು ಎಂದರೆ ಸರಿಯಲ್ಲ.

ಆ ಸಮಯ ನಾನು, ನನ್ನ ಮಗ ಮತ್ತು ಮಗಳೊಂದಿಗೆ ಸೇರಿ ಆರೋಪಿಗೆ ಹಲ್ಲೆ ಮಾಡಿದ್ದೇವು ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ ಕುಡಿದು ಕಣಿವೆಯಲ್ಲಿ ಅಪಘಾತವಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವು ಹಲ್ಲೆ ಮಾಡಿದ ಗಾಯಗಳಿಗೆ ಆರೋಪಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಗೆ ಬಂದಿದ್ದ ಸಮಯ ಆತನ ತಂದೆ ಹೆಸರಿನಲ್ಲಿದ್ದ ಮನೆಯನ್ನು ನನ್ನ ಮಗಳ ಹೆಸರಿಗೆ ಮಾಡಿಕೊಟ್ಟಿದ್ದನು ಎಂದರೆ ಸಾಕ್ಷಿಯು ಆತನ ಮಗಳು (ರೋಜಳ ಮಗಳು) ಮಗಳ ಹೆಸರಿಗೆ ಮಾಡಿಕೊಟ್ಟಿದ್ದನು ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ರೋಜ ವಾಸವಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳಾದ ಸ್ವಾತಿ ಮತ್ತು ಸಿಂಧೂ ಗಂಡನನ್ನು ಬಿಟ್ಟು ನನ್ನೊಂದಿಗೆ ವಾಸವಿದ್ದಾರೆ ಎಂದರೆ ಸಾಕ್ಷಿಯು ಸಿಂಧೂ ಮಾತ್ರ ವಾಸವಿದ್ದಾರೆ, ಆಕೆಯ ಗಂಡ ಡೈವರ್ಸ್ ನೀಡಿರುತ್ತಾರೆ ಎಂದು ನುಡಿಯತ್ತಾರೆ. ಸಿಂಧೂ ಗಂಡ ಸಹ ನಮ್ಮ ಜೊತೆ ವಾಸವಿದ್ದರು, ಅವರಿಂದ ಕೆಲಸ ಮಾಡಿಸಿಕೊಂಡು ಹಣ ನೀಡದೇ, ಹೊಡೆದು ದೂರ ಕಳುಹಿಸಿದ್ದೇವು ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಗಳು ಮನೆಗೆ ಬಂದಾಗ ಗಲಾಟೆ ಮಾಡಿಕೊಂಡಿದ್ದರು, ಆರೋಪಿಗೆ ಬೇರೆ ಹೆಂಗಸಿನೊಂದಿಗೆ ಸಂಬಂಧ ಇತ್ತು ಎಂದು ನುಡಿಯುತ್ತಾರೆ. ಆರೋಪಿ ನನ್ನ ಮಗಳಿಗೆ

ಕಳುಹಿಸಿದ ವಿಡಿಯೋಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ವಿಡಿಯೋಗಳನ್ನು ನಾವು ಪೊಲೀಸರಿಗೆ ನೀಡಿರುವುದಿಲ್ಲ. ನಮ್ಮ ಊರಿನಿಂದ ಬಿಳ್ಳೂರಿಗೆ 40-46 ಕಿ. ಮೀಟರ್ ಅಂತರ ಇರುತ್ತದೆ. ಬುಧವಾರ ಸಂತೆಯಾಗುತ್ತದೆ, ಆ ಬಗ್ಗೆ ಪೊಲೀಸರಿಗೆ ಹೇಳಿರುತ್ತೇನೆ. ನಾವು ನಮ್ಮ ಊರಿನಿಂದ ಬಿಳ್ಳೂರಿಗೆ ಹೋಗುವ ರಸ್ತೆ ಹಳ್ಳದಿಂದ ಕೂಡಿವೆ ಎಂದರೆ ಸರಿಯಲ್ಲ. ನಾವು ಸಂತೆ ಹಾಕುವ ಸ್ಥಳದಲ್ಲಿ ತುಂಬಾ ಜನರು ಇರುತ್ತಾರೆ ಮತ್ತು ಅಂಗಡಿಗಳು ಇರುತ್ತವೆ ಎಂದರೆ ಸರಿ, ಸಾಕ್ಷಿ ಮುಂದುವರೆದ ಸಂಜೆ ಸಮಯ ಅಂಗಡಿಗಳು ಇರುವುದಿಲ್ಲ, ಜನರು ಕಡಿಮೆ ಇರುತ್ತಾರೆ ಎಂದು ನುಡಿಯುತ್ತಾರೆ. ಸಂತೆಗೆ ಬಂದ ಅಂಗಡಿಯವರು ಒಂದೇ ಸಮಯಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ. ಸಂತೆ ರಾತ್ರಿ 8.00 ಗಂಟೆವರೆಗೂ ಇರುತ್ತದೆ ಎಂದರೆ ಸರಿಯಲ್ಲ. ವೈದ್ಯರಿಗೆ ನೀಡಿದ ಹೇಳಿಕೆಯಲ್ಲಿ ಮಾಸ್ಕ್ ಹಾಕಿಕೊಂಡು ಬಂದ ಬಗ್ಗೆ ಹೇಳಿರುತ್ತೇನೆ. ನನ್ನ ಮಗಳಿಗೆ ಮತ್ತು ಮಗನಿಗೆ ಹಲ್ಲೆ ಮಾಡಿದಾಗ ನಾವು ಬೊಬ್ಬೆ ಹೊಡಿರುತ್ತೇವೆ. ಆರೋಪಿಯನ್ನು ಹಿಡಿದುಕೊಂಡಿರುವುದು ನಾನು ನೋಡಿರುವುದಿಲ್ಲ. ಆರೋಪಿ ಮಾಸ್ಕ್ ಹಾಕಿಕೊಂಡು ಹಲ್ಲೆ ಮಾಡಿರುವುದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾರು ನಮಗೆ ಹಲ್ಲೆ ಮಾಡಿಲ್ಲ, ಸಂತೆಗೆ ಬರುವ ಸಮಯ ನಮ್ಮ ವಾಹನದಲ್ಲಿ ನಾವೇ

ಬಿದ್ದು ಗಾಯ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದವರು ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಬಾಗೇಪಲ್ಲಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಹಲ್ಲೆಯ ಬಗ್ಗೆ ಹೇಳಿರುತ್ತೇವೆ, ಆ ಬಗ್ಗೆ ಹೇಳಿಕೆ ಪಡೆದುಕೊಂಡಿರುತ್ತಾರೆ. ನಾನು ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಅವರುಗಳು ಎಲ್ಲಿ ಚಿಕಿತ್ಸೆ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಸಿಂಧೂ ನನ್ನೊಂದಿಗೆ ಇದ್ದರು. ನಾನು ಹೇಳಿಕೆ ನೀಡಿದಾಗ ಯಾವ ಪೊಲೀಸರು ಇದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನೀವು ಮೂರು ಜನ ಚಿಕ್ಕಬಳ್ಳಾಪುರ ಆಸ್ಪತ್ರೆಗೆ ಬಂದಿದ್ದಾ ಎಂದರೆ ಸಾಕ್ಷಿಯು ಚಿಕ್ಕಬಳ್ಳಾಪುರಕ್ಕೆ ಬರುವಷ್ಟರಲ್ಲೆ ನನಗೆ ಪ್ರಜ್ಞೆ ಇರಲಿಲ್ಲ. ಚಿಕ್ಕಬಳ್ಳಾಪುರ ಆಸ್ಪತ್ರೆಯಲ್ಲಿ ವೈದ್ಯರು ಯಾವ ಚಿಕಿತ್ಸೆ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಚಿಕ್ಕಬಳ್ಳಾಪುರದಲ್ಲಿ ನನ್ನ ಮಗ ಮತ್ತು ಮಗಳು ಚಿಕಿತ್ಸೆ ಪಡೆದಿರುವುದಿಲ್ಲ, ಆದರೆ ಗಾಯಗಳಿಗೆ ಔಷಧಿ ಹಾಕಿಕೊಂಡಿರುತ್ತಾರೆ. ಬೆಂಗಳೂರಿನ ಆಸ್ಪತ್ರೆಗೆ ಪುಟ್ಟಪರ್ತಿ ವೆಂಕಟೇಶಪ್ಪ, ಹರಿ, ಸಿಂಧೂ, ಲಕ್ಷ್ಮಿನಾರಾಯಣಪ್ಪ ರವರುಗಳು ಕರೆದುಕೊಂಡು ಹೋಗಿದ್ದರು. ಆ ಸಮಯ ದಿನೇಶ್ ಮತ್ತು ರೋಜ ವಿಕ್ಟೋರಿಯಾ ಆಸ್ಪತ್ರೆಯ ಬೇರೆ ವಾರ್ಡಿನಲ್ಲಿದ್ದರು. ವಿಕ್ಟೋರಿಯಾ

ಆಸ್ಪತ್ರೆಗೆ ಪೊಲೀಸರು ಬಂದು ನನ್ನನ್ನು ವಿಚಾರಣೆ ಮಾಡಿದ್ದರು. ಆ ಸಮಯ ನನಗೆ ಮಾತನಾಡಲು ಆಗುತ್ತಿರಲಿಲ್ಲ. ಪೊಲೀಸರಿಗೆ ಮಾಹಿತಿಯನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಾನೇ ನೀಡಿರುತ್ತೇನೆ. ನಾವು ತೆಲುಗಿನಲ್ಲಿ ಹೇಳಿದ್ದನ್ನು ಪೊಲೀಸರು ಕನ್ನಡದಲ್ಲಿ ಬರೆದುಕೊಂಡಿರುತ್ತಾರೆ. ಪೊಲೀಸರಿಗೆ ತೆಲುಗು ಬರುತ್ತಿತ್ತು. ನಾನು ಪೊಲೀಸರಿಗೆ ಹೇಳಿಕೆ ನೀಡಿರಲಿಲ್ಲ, ಮಾಹಿತಿಯನ್ನು ರೋಜರವರು ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ನೀವು ಹಣ್ಣಿನ ವ್ಯಾಪಾರ ಮಾಡುವುದರಿಂದ ನಿಮ್ಮ ಜೊತೆ ಚಾಕುವನ್ನು ತೆಗೇದುಕೊಂಡು ಹೋಗಿರುತ್ತೀರಿ ಎಂದರೆ ಸರಿ. ಅದೇ ಚಾಕುವನ್ನು ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಸಾರ್ವಜನಿಕರಿಗೆ ಹಣ್ಣು ಕೊಯ್ದುಕೊಡಲು ಚಾಕು ಇಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ನೋಡಿದ ಬಟ್ಟೆಗಳನ್ನು ನನ್ನ ಮಗ ಮತ್ತು ಮಗಳು ಪೊಲೀಸರಿಗೆ ನೀಡಿದ ಬಟ್ಟೆಗಳು ಎಂದರೆ ಸಾಕ್ಷಿಯು ಪೊಲೀಸರೆ ಬಟ್ಟೆಗಳನ್ನು ತೆಗೆದುಕೊಂಡರು ಎಂದು ನುಡಿಯುತ್ತಾರೆ. ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿರಲಿಲ್ಲ, ಆದರೆ ಅಲ್ಲಿಗೆ ಹೋಗಿದ್ದರು. ರೋಜರವರು ಗರ್ಭಿಣಿಯಾಗಿ ನಮ್ಮ ಮನೆಗೆ ಬಂದಾಗ ಆರೋಪಿಗೆ ಆಕೆಗೆ ಮೊದಲು ಮದುವೆಯಾಗಿದ್ದ ವಿಚಾರ ಗೊತ್ತಾಗಿ ಗಲಾಟೆಯಾಗುತ್ತಿತ್ತು ಎಂದರೆ

ಸರಿಯಲ್ಲ. ನಾವು ಬಿದ್ದು ಮಾಡಿಕೊಂಡ ಗಾಯಗಳಿಗೆ ಚಿಕಿತ್ಸೆ ಪಡೆದು, ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಲ್ಲೆ ಮಾಡದೇ ಇದ್ದರೂ ನನ್ನ ಮಗಳು ಮತ್ತು ಮಗ ಹೇಳಿಕೊಟ್ಟ ಹಾಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಕುತ್ತಿಗೆಗೆ ಆದ ಗಾಯ ಮೊದಲೇ ಆಗಿತ್ತು ಎಂದರೆ ಸರಿಯಲ್ಲ. ಜೈಲಿನಿಂದ ಆರೋಪಿ ನನ್ನ ಮೊಬೈಲ್ ಸಂಖ್ಯೆ ಗೆ ಕರೆ ಮಾಡುತ್ತಿದ್ದನು. ಆ ಸಂಧರ್ಭದಲ್ಲಿ ಆರೋಪಿ ತನ್ನ ಹೆಂಡತಿ ಮಕ್ಕಳೊಂದಿಗೆ ಮಾತನಾಡಲು ಕರೆ ಮಾಡಿದ್ದು, ಬೆದರಿಕೆ ಹಾಕಲು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ತನ್ನ ಹೆಂಡತಿಯೊಂದಿಗೆ ಮಾತನಾಡುವ ಇಚ್ಚೆ ಹೊಂದಿದ್ದರೆ ಆಕೆಯ ಮೊಬೈಲ್ ಕರೆ ಮಾಡಿ ಮಾತನಾಡಿಸುತ್ತಿದ್ದನು, ನನ್ನ ಮೊಬೈಲ್ ಸಂಖ್ಯೆಗೆ ಕರೆ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಆರೋಪಿ ಸದರಿ ದಿನ ಮಾಸ್ಕ್ ಹಾಕಿಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಮನೆಯಿಂದ ಹೊರ ಹಾಕಲು ನಮ್ಮ ಕುಟುಂಬದವರೆಲ್ಲಾ ಸೇರಿಕೊಂಡು ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ 21.04.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**